## **ಸ್ವಾತಂತ್ರ್ಯ ಹೋರಾಟಗಾರರ ಉಚಿತ ಬಸ್ ಪಾಸ್:**

ಸರ್ಕಾರದ ಆದೇಶದಂತೆ ಸ್ವಾತಂತ್ರ್ಯ ಹೋರಾಟಗಾರರಿಗೆ **ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದ್ದು,** 75 ವರ್ಷ ಮತ್ತು ಮೇಲ್ಪಟ್ಟ ವಯಸ್ಸಿನ ಸ್ವಾತಂತ್ರ್ಯ ಹೋರಟಗಾರರಿಗೆ ಜೊತೆಗೊಬ್ಬ ಸಹಾಯಕರೊಂದಿಗೆ ಪ್ರಯಾಣಿಸಲು ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತಿದೆ. ಸದರಿ ಪಾಸ್‌ಗಳನ್ನು ಪಡೆದ ಸ್ವಾತಂತ್ರ್ಯ ಹೋರಟಗಾರರು ಸಂಸ್ಥೆಯ ನಗರ,ನಗರ ಹೊರವಲಯ, ಸಾಮಾನ್ಯ ವೇಗದೂತ,ಅರೆ ಸುವಿಹಾರಿ ಮತ್ತು ರಾಜಹಂಸ ಸಾರಿಗೆಗಳಲ್ಲಿ ರಾಜ್ಯಾದ್ಯಂತ ಹಾಗೂ ಅಂತರ ರಾಜ್ಯ ವ್ಯಾಪ್ತಿಯಲ್ಲಿಯೂ ಸಹ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಉಚಿತ ಬಸ್ ಪಾಸ್ ಪಡೆಯಲು ಇಚ್ಛಿಸುವ ಸ್ವಾತಂತ್ರ್ಯ ಹೋರಾಟಗಾರರು ಈ ಕೆಳಕಂಡ ಮಾಹಿತಿ ಮತ್ತು ದಾಖಲೆಗಳೊಂದಿಗೆ ಅವರು ವಾಸಿಸುತ್ತಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬೇಕು.

ಅ) ಅವರಿಗೆ ಸ್ವಾತಂತ್ರ್ಯ ಸೈನಿಕ ಸನ್ಮಾನ ಗೌರವ ಧನ ಮಂಜೂರಾದ ಸರ್ಕಾರಿ ಆದೇಶ

ಬ) ಕರ್ನಾಟಕ ರಾಜ್ಯ ಮಹಾ ಲೇಖಪಾಲರು ಅವರಿಗೆ ನೀಡಿರುವ ಗೌರವ ಧನ ಬಟಾವಾಡೆ ಆದೇಶ.

ಕ) ಪತ್ರಾಂಕಿತ ಅಧಿಕಾರಿಗಳು ದೃಢೀಕರಿಸಿದ ಸಂಬಂಧಪಟ್ಟ ಸ್ವಾತಂತ್ರ್ಯ ಹೋರಾಟಗಾರರ ಇತ್ತಿಚಿನ 4 ಭಾವ ಚಿತ್ರಗಳು.

ಡ)ಅರ್ಜಿದಾರರು ಅಸಲಿ ಸ್ವಾತಂತ್ರ್ಯ ಹೋರಾಟಗಾರರೆಂದು ದೃಢೀಕರಣಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಇನ್ನಿತರ ದಾಖಲೆಗಳು.